ಕರ್ನಾಟಕ ವಿಧಾನ ಪರಿಷತ್ತು


ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1000
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ ರಾಥೋಡ್
ಉತ್ತರಿಸುವ ದಿನಾಂಕ	:	21/09/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣ ಪಂಚಾಯತ್‌ನ್ನು ಮೇಲ್ದರ್ಜೆಗೇರಿಸಿ ಪುರಸಭೆಯನ್ನಾಗಿ ಮಾಡಲಾಗಿದೆಯೇ;</td><td>ಹೌದು.</td></tr>
<tr><td>(ಆ)</td><td>ಈ ಪುರಸಭೆಗೆ ಸೇರಿರುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ ಎಷ್ಟು; ಹಾಗೂ ಈ ಗ್ರಾಮ ಪಂಚಾಯತ್‌ಗಳು ಪುರಸಭೆಯ ಮುಖ್ಯಸ್ಥಳದಿಂದ ಎಷ್ಟು ದೂರದಲ್ಲಿವೆ; ಈ ಪುರಸಭೆಗೆ ಹತ್ತಿರದಲ್ಲಿರುವ ಹಳ್ಳಿಗಳನ್ನು ಕೈ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ದಿನಾಂಕ 23/03/2021ರ ಸರ್ಕಾರದ ಅಧಿಸೂಚನೆಯನ್ವಯ ಹೊಳಲ್ಕೆರೆ ಪುರಸಭೆಗೆ 05 ಗ್ರಾಮ ಪಂಚಾಯಿತಿಗಳ 06 ಗ್ರಾಮಗಳು ಸೇರಿರುತ್ತದೆ. ಸದರಿ ಗ್ರಾಮಗಳು ಪುರಸಭೆ ಮುಖ್ಯ ಸ್ಥಳದಿಂದ ದೂರದಲ್ಲಿ ಇರುವ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಹೊಳಲ್ಕೆರೆ ಪುರಸಭಾ ವ್ಯಾಪ್ತಿಗೆ ಸೇರ್ಪಡೆಗೊಳಿಸಲಾದ ಗ್ರಾಮಗಳ ವಿವರ</th><th>ಪುರಸಭೆ ಮುಖ್ಯ ಸ್ಥಳದಿಂದ ಇರುವ ದೂರ ಕಿ.ಮೀ.ಗಳಲ್ಲಿ</th></tr>
<tr><td>1.</td><td>ಹೊಳಲ್ಕೆರೆ ಪಟ್ಟಣ (ಹೊಳಲ್ಕೆರೆ ಕಂದಾಯ ಗ್ರಾಮದ ಭಾಗ),</td><td>0</td></tr>
<tr><td>2.</td><td>ಗುಂಡೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಳಲ್ಕೆರೆ ಲಂಬಾಣಿಹಟ್ಟಿ (ಹೊಳಲ್ಕೆರೆ ಕಂದಾಯ ಗ್ರಾಮದ ಭಾಗ)</td><td>2</td></tr>
<tr><td>3.</td><td>ಶಿವಗಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಡಿನೀರಕಟ್ಟೆ (ಕುಡಿನೀರಕಟ್ಟೆ ಲಂಬಾಣಿಹಟ್ಟಿ ಒಳಗೊಂಡಂತೆ ಕಂದಾಯ ಗ್ರಾಮದ ಭಾಗ),</td><td>2.2</td></tr>
<tr><td>4.</td><td>ಮದ್ದೇರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳೇಹಳ್ಳಿ ಲಂಬಾಣಿಹಟ್ಟಿ (ಹಳೇಹಳ್ಳಿ ಲಂಬಾಣಿಹಟ್ಟಿ ಒಳಗೊಂಡಂತೆ ಕಂದಾಯ ಗ್ರಾಮದ ಭಾಗ),</td><td>5</td></tr>
<tr><td>5.</td><td>ಅರೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಮ್ಮನಾಳು (ಕಂದಾಯ ಗ್ರಾಮದ ಭಾಗ) (ಜೈಪುರ), ಅರೇಹಳ್ಳಿ (ಕಂದಾಯ ಗ್ರಾಮದ ಭಾಗ)</td><td>5</td></tr>
<tr><td>6.</td><td>ಆಡನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೀರನಹಳ್ಳಿ (ಕಂಬದೇವರಹಟ್ಟಿ ಒಳಗೊಂಡು ಕಂದಾಯ ಗ್ರಾಮದ ಭಾಗ)</td><td>2.5</td></tr>
</table>
ಪಟ್ಟಣ ಪಂಚಾಯಿತಿಗೆ ಹತ್ತಿರದಲ್ಲಿರುವ ಪ್ರದೇಶಗಳನ್ನು ಸೇರ್ಪಡೆಗೊಳಿಸಲಾಗಿದೆ.</td></tr>
</table>

(ಇ)	ಹೊಳಲ್ಕೆರೆ ಪುರಸಭೆಯನ್ನು ಹಲವಾರು ಗ್ರಾಮ ಪಂಚಾಯತ್ ಗ್ರಾಮಸ್ಥರು ವಿರೋದಿಸಿದ್ದರು ಪುರಸಭೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಳಲ್ಕೆರೆ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ದಿನಾಂಕ 31/12/2020ರಲ್ಲಿ ಹೊರಡಿಸಲಾದ ಕರಡು ಅಧಿಸೂಚನೆಗೆ ಹೊಳಲ್ಕೆರೆಯ ಲಂಬಾಣಿಹಟ್ಟಿ, ಚೀರನಹಳ್ಳಿ, ಕಂಬದೇವರಹಟ್ಟಿ, ಹಳೇಹಳ್ಳಿ ಲಂಬಾಣಿಹಟ್ಟಿ(ಕಣಿವೆ), ಕುಡಿನೀರುಕಟ್ಟೆ, ಜೈಪುರ, ಅರೇಹಳ್ಳಿ ಮತ್ತು ಜಯಂತಿನಗರ ಕುಡಿನೀರುಕಟ್ಟೆ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯತಿ ಸದಸ್ಯರುಗಳಿಂದ ಆಕ್ಷೇಪಣೆ ಅರ್ಜಿಗಳು ಸಲ್ಲಿಕೆಯಾಗಿರುತ್ತದೆ. ಈ ಆಕ್ಷೇಪಣೆಗಳ ಬಗ್ಗೆ ಚಿತ್ರದುರ್ಗ ಜಿಲ್ಲಾಧಿಕಾರಿ ರವರಿಂದ ಅಭಿಪ್ರಾಯದ ವರದಿಯನ್ನು ಪಡೆದು, ಪರಿಶೀಲಿಸಿದ ನಂತರ ದಿನಾಂಕ 23/03/2021 ರಲ್ಲಿ ಹೊಳಲ್ಕೆರೆ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.
(ಈ)	ಕಳೆದ ಅಧಿವೇಶನದಲ್ಲಿ ಪ್ರಸ್ತಾಪಿಸಲಾದ ಪ್ರಶ್ನೆಗೆ ರಾಜ್ಯದಲ್ಲಿ ಸೃಜಿಸಲಾದ ಹೊಸ ಪುರಸಭೆ, ನಗರಸಭೆ, ಪಟ್ಟಣ ಪಂಚಾಯತ್‌ಗಳ ಬಗ್ಗೆ ಮಾಹಿತಿ ಕೇಳಿದಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಪುರಸಭೆ ಸೃಜನೆ ಆಗಿರುವ ಮಾಹಿತಿ ಇರುವುದಿಲ್ಲ ಎಂದು ಮಾಹಿತಿ ನೀಡಿದ್ದು, ಪುರಸಭೆ ಮಾಡಿರುವ ಬಗ್ಗೆ ಕಾರಣಗಳೇನು?	ಕಳೆದ ಅಧಿವೇಶನದ ದಿನಾಂಕ 02/02/2021ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 251 ಕ್ಕೆ ಉತ್ತರಿಸುವ ಸಂದರ್ಭದಲ್ಲಿ ಹೊಳಲ್ಕೆರೆ ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ಪರಿವರ್ತನೆಗೊಂಡಿಲ್ಲದ ಕಾರಣ ಮಾಹಿತಿಯನ್ನು ನೀಡಲ್ಪಟ್ಟಿರುವುದಿಲ್ಲ. ಹೊಳಲ್ಕೆರೆ ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ದಿನಾಂಕ 23/03/2021 ರಲ್ಲಿ ಸೃಜನೆಯಾಗಿರುತ್ತದೆ.

ಸಂಖ್ಯೆ: ನಅಇ/34/ಎಲ್‌ಸಿಕ್ಯೂ/2021

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ಯಮಗಳ ಸಚಿವರು.



ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1000 ಕ್ಕೆ ಪೂರಕ ಟಿಪ್ಪಣಿ

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 207 ಎಂಎಲ್ಆರ್ 2020; ದಿನಾಂಕ:23/03/2021 ರನ್ವಯ ಹೊಳಲ್ಕೆರೆ ಪುರಸಭೆಗೆ 05 ಗ್ರಾಮ ಪಂಚಾಯಿತಿಗಳ 06 ಗ್ರಾಮಗಳು ಸೇರಿರುತ್ತವೆ. ಸದರಿ ಗ್ರಾಮಗಳು ಪುರಸಭೆಗೆ ಸುಮಾರು 2.00 ರಿಂದ 5.00 ಕಿ.ಮೀ ದೂರದಲ್ಲಿರುತ್ತವೆ. ಈ ಗ್ರಾಮಗಳ ವಿವರ ಕೆಳಕಂಡಂತಿದೆ:

ಕ್ರ. ಸಂ.	ಹೊಳಲ್ಕೆರೆ ಪುರಸಭಾ ವ್ಯಾಪ್ತಿಗೆ ಸೇರ್ಪಡೆಗೊಳಿಸಲಾದ ಗ್ರಾಮಗಳ ವಿವರ	ಪುರಸಭೆ ಮುಖ್ಯ ಸ್ಥಳದಿಂದ ಇರುವ ದೂರ ಕಿ.ಮೀ.ಗಳಲ್ಲಿ
1.	ಹೊಳಲ್ಕೆರೆ ಪಟ್ಟಣ (ಹೊಳಲ್ಕೆರೆ ಕಂದಾಯ ಗ್ರಾಮದ ಭಾಗ),	0
2.	ಗುಂಡೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಳಲ್ಕೆರೆ ಲಂಬಾಣಿಹಟ್ಟಿ (ಹೊಳಲ್ಕೆರೆ ಕಂದಾಯ ಗ್ರಾಮದ ಭಾಗ)	2
3.	ಶಿವಗಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಡಿನೀರಕಟ್ಟೆ (ಕುಡಿನೀರಕಟ್ಟೆ ಲಂಬಾಣಿಹಟ್ಟಿ ಒಳಗೊಂಡಂತೆ ಕಂದಾಯ ಗ್ರಾಮದ ಭಾಗ),	2.2
4.	ಮದ್ದೇರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳೇಹಳ್ಳಿ ಲಂಬಾಣಿಹಟ್ಟಿ (ಹಳೇಹಳ್ಳಿ ಲಂಬಾಣಿಹಟ್ಟಿ ಒಳಗೊಂಡಂತೆ ಕಂದಾಯ ಗ್ರಾಮದ ಭಾಗ),	5
5.	ಅರೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಮ್ಮನಾಳು (ಕಂದಾಯ ಗ್ರಾಮದ ಭಾಗ) (ಜೈಪುರ), ಅರೇಹಳ್ಳಿ (ಕಂದಾಯ ಗ್ರಾಮದ ಭಾಗ)	5
6.	ಆಡನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೀರನಹಳ್ಳಿ (ಕಂಬದೇವರಹಟ್ಟಿ ಒಳಗೊಂಡು ಕಂದಾಯ ಗ್ರಾಮದ ಭಾಗ)	2.5

ಉಳಿದಂತೆ, ಪಟ್ಟಣ ಪಂಚಾಯಿತಿಗೆ ಹತ್ತಿರದಲ್ಲಿರುವ ಇತರ ಪ್ರದೇಶಗಳನ್ನು ಪುರಸಭೆ ವ್ಯಾಪ್ತಿಗೆ ಸೇರ್ಪಡೆಗೊಳಿಸಲಾಗಿದೆ.

ಹೊಳಲ್ಕೆರೆ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ದಿನಾಂಕ 31/12/2020 ರಲ್ಲಿ ಹೊರಡಿಸಲಾದ ಕರಡು ಅಧಿಸೂಚನೆ ಸಂಖ್ಯೆ:ನಅಇ 207 ಎಂಎಲ್ಆರ್ 2020 ಕ್ಕೆ ಹೊಳಲ್ಕೆರೆಯ ಲಂಬಾಣಿಹಟ್ಟಿ, ಚೀರನಹಳ್ಳಿ, ಕಂಬದೇವರಹಟ್ಟಿ, ಹಳೇಹಳ್ಳಿ ಲಂಬಾಣಿಹಟ್ಟಿ(ಕಣಿವೆ), ಕುಡಿನೀರುಕಟ್ಟೆ, ಜೈಪುರ, ಅರೇಹಳ್ಳಿ ಮತ್ತು ಜಯಂತಿನಗರ ಕುಡಿನೀರುಕಟ್ಟೆ ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯತಿ ಸದಸ್ಯರುಗಳಿಂದ ಆಕ್ಷೇಪಣೆ ಅರ್ಜಿಗಳು ಸಲ್ಲಿಕೆಯಾಗಿರುತ್ತವೆ. ಈ ಆಕ್ಷೇಪಣೆಗಳ ಬಗ್ಗೆ ಚಿತ್ರದುರ್ಗ ಜಿಲ್ಲಾಧಿಕಾರಿಯವರಿಂದ ಅಭಿಪ್ರಾಯದ ವರದಿಯನ್ನು ಪಡೆದು, ಪರಿಶೀಲಿಸಿದ ನಂತರ ದಿನಾಂಕ 23/03/2021 ರಂದು ಹೊಳಲ್ಕೆರೆ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.

ಕಳೆದ ಅಧಿವೇಶನದಲ್ಲಿ, ದಿನಾಂಕ 02/02/2021 ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 251 ಕ್ಕೆ ಉತ್ತರಿಸುವ ಸಂದರ್ಭದಲ್ಲಿ ಹೊಳಲ್ಕೆರೆ ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ಪರಿವರ್ತನೆಗೊಂಡಿಲ್ಲದ ಕಾರಣ ಮಾಹಿತಿಯನ್ನು ನೀಡಲಾಗಿರುವುದಿಲ್ಲ. ಹೊಳಲ್ಕೆರೆ ಪಟ್ಟಣ ಪಂಚಾಯಿತಿಯನ್ನು ಅಧಿಸೂಚನೆ ಸಂಖ್ಯೆ:ನಅಇ 207 ಎಂಎಲ್ಆರ್ 2020; ದಿನಾಂಕ:23/03/2021 ರನ್ವಯ ಪುರಸಭೆಯನ್ನಾಗಿ ಅಧಿಸೂಚಿಸಲಾಗಿರುತ್ತದೆ.

ಸಂಖ್ಯೆ: ನಅಇ/34/ಎಲ್‌ಸಿಕ್ಯೂ/2021